ಕೇಳಿದ್ದಕ್ಕೆ ಮಾನ್ಯ ಸಚಿವರು ಇದಕ್ಕೆ ಒಪ್ಪಿಕೊಂಡಿದ್ದಾರೆ. ಸದರಿ ನಗರದ ಜನತೆಗೆ ನೀರೊದಗಿಸಲು ರೂ.9.90 ಲಕ್ಷದ ಅಂದಾಜನ್ನು 1999-2000ರ ವಿಶೇಷ ಘಟಕ ಯೋಜನೆಯಡಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈ ಅನುಮೋದನೆ ಕೊಟ್ಟಿದ್ದಕ್ಕಾಗಿ ಮಾನ್ಯ ಸಚಿವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನಗೊಳಿಸಬೇಕು ಎಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾವಾಗ ಅನುಷ್ಠಾನಗೊಳಿಸುತ್ತೀರಿ ಎಂಬುದನ್ನು ತಿಳಿಸಬೇಕು, ಮತ್ತೊಂದು ವಿನಂತಿ ಏನೆಂದರೆ, ಹುಬ್ಬಳಿ ನಗರದ ಕುಡಿಯುವ ನೀರಿನ ಯೋಜನೆ ಸುಮಾರು 38 ಕೋಟಿ ರೂಪಾಯಿ ಇದ್ದು ಪೈಪ್‌ಲೈನ್‌ನನ್ನು ರಿಪ್ಲೇಸ್ ಮಾಡುವಂಥಾದ್ದಾಗಿದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳಿ ನಗರಕ್ಕೆ ಬಂದಾಗ 130 ಕೋಟಿ ರೂಪಾಯಿ ವೆಚ್ಚದಲ್ಲಿ ಕುಡಿಯುವ ನೀರಿಗಾಗಿ ಯೋಜನೆಯೊಂದನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಈ ಯೋಜನೆಯನ್ನು ಸ್ಕಾಂಕ್ಷನ್ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ : ಯೋಜನೆಗೆ ಮಂಜೂರಾತಿ ಕೊಟ್ಟಿದ್ದಕ್ಕೆ ಮಾನ್ಯ ಸದಸ್ಯರು ನನಗೆ ಅಭಿನಂದನೆಯನ್ನು ಸಲ್ಲಿಸಿರುವುದರಿಂದ ನಾನೂ ಕೂಡ ಅವರಿಗೆ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ. ಈ ಯೋಜನೆಯನ್ನು ಆದಷ್ಟು ಬೇಗನೆ ಪ್ರಾರಂಭ ಮಾಡುತ್ತೇವೆ ಇದರ ಬಗ್ಗೆ ಅನುಮಾನ ಬೇಡ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅವರಿಂದ ಅನುಮೋದನೆ ಬಂದ ತಕ್ಷಣ ಆ ದೊಡ್ಡ ಯೋಜನೆಯನ್ನು ಕೂಡ ಪ್ರಾರಂಭ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ.

ಮೈಸೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆಯನ್ನು ಏರಿಸಿರುವುದರ ಬಗ್ಗೆ

246 (1595)

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಪೌರಾಡಳಿತ ರಾಜ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ಮೈಸೂರು ಮಹಾನಗರ ಪಾಲಿಕೆ ಆಸ್ತಿ ತೆರಿಗೆಯನ್ನು 10 ಪಟ್ಟು ಹೆಚ್ಚಿಸಿದ್ದು ನಗರದ ಸಾರ್ವಜನಿಕರು ಹೆಚ್ಚಿಸಿದ ಮನೆ ಕಂದಾಯ ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

(ಅ) ಮೈಸೂರು ಮಹಾನಗರ ಪಾಲಿಕೆಯವರು ತೆರಿಗೆಯನ್ನು ಪರಿಷ್ಕರಿಸಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಇದರಿಂದ ಸ್ವಲ್ಪ ಜನತೆಗೆ ತೊಂದರೆಯಾಗಿದ್ದು ಅವರು ಪ್ರತಿಭಟಿಸುತ್ತಿದ್ದಾರೆ.

(ಆ) ಈಗಾಗಲೇ ಮಹಾನಗರ ಪಾಲಿಕೆ ಕಂದಾಯ ಪರಿಷ್ಕರಣೆಯನ್ನು ತಾತ್ಕಾಲಿಕವಾಗಿ ತಡೆಹಿಡಿದಿದೆ. ಹಾಗೂ ಮಾನ್ಯ ಮಹಾಪೌರರು ಮೈಸೂರು ಸಿಟಿ ಕಾರ್ಪೊರೇಷನ್, ಇವರ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿಯನ್ನು ನೇಮಿಸಿದ್ದು, ಈ ರೀತಿ ಹೆಚ್ಚಳವಾಗಿರುವ ಹಾಗೂ ವರ್ಗೀಕರಣದ ಬಗ್ಗೆ ಉಂಟಾಗಿರುವ ನ್ಯೂನತೆಗಳನ್ನು ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಇ. ಮಾರುತಿರಾವ್ ಪವಾರ್ :- ಸಚಿವರ ಉತ್ತರದಲ್ಲಿ ಮೈಸೂರು ನಗರದ ನಾಗರೀಕರು ಪ್ರತಿಭಟನೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದರ ಜೊತೆಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಂದು ಸದನ ಸಮಿತಿಯನ್ನು ರಚನೆ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಅವಮಾನಕರವಾದ ವಿಚಾರ. ಇವತ್ತು ಮೈಸೂರು ನಗರದಲ್ಲಿ ಹಿಂದೆ 400 ರೂಪಾಯಿ ತೆರಿಗೆ ಕಟ್ಟುತ್ತಿದ್ದವರು ಇವತ್ತು ಈ ಪರಿಷ್ಕರಣದಿಂದ ಸುಮಾರು 13,000 ರೂಪಾಯಿ ತೆರಿಗೆಗಾಗಿ ನೋಟೀಸ್‌ಗಳು ಬರುತ್ತಿವೆ. 600 ರೂಪಾಯಿ ತೆರಿಗೆ ಕಟ್ಟುತ್ತಿದ್ದವರಿಗೆ ಇವತ್ತು ಒಂಬತ್ತು ಸಾವಿರ ರೂಪಾಯಿ ತೆರಿಗೆ ಕಟ್ಟುವುದಕ್ಕೆ ನೋಟಿಸ್ ಬರುತ್ತಿವೆ. ನಾನು ಈ ಸಂದರ್ಭದಲ್ಲಿ ಏನು ಹೇಳುತ್ತೇನೆಂದರೆ, ಈ ರೀತಿ ಹೆಚ್ಚಳ ಮಾಡುವುದರ ಬದಲು ಈಗೇನು ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಒಂದು ಸದನ ಸಮಿತಿ ಮಾಡಿದ್ದಾರೆ ಇದರ ಮೂಲಕ ವಿಚಾರ ಮಾಡಿ ಸರಿಯಾದಂಥ ನಿರ್ಧಾರವನ್ನು ತೆಗೆದುಕೊಳ್ಳುವವರೆಗೆ ಹಾಗೂ ಇದು ಒಂದು ಹಂತಕ್ಕೆ ಬರುವವರಿಗೆ ಸಧ್ಯಕ್ಕೆ ಇದನ್ನು ನಿಲ್ಲಿಸಬೇಕು.

ಈಗ ಮೈಸೂರು ನಗರದಲ್ಲಿ ಸುಮಾರು ಹಳೆಯ ಕಟ್ಟಡಗಳನ್ನು ಕಟ್ಟಿರತಕ್ಕಂಥ ಕಟ್ಟಡಗಳು ಏನು ಇವೆ ಅದಕ್ಕೆ ಶೇಕಡ 25 ಕಂದಾಯ ನಿಗದಿ ಮಾಡಿರುವುದಿಲ್ಲ. ಅದೂ ಅಲ್ಲದೆ ಹಳೆಯ ಕಟ್ಟಡಗಳನ್ನು ಕೆಡವಿ ಹೊಸಕಟ್ಟಡಗಳನ್ನು ಏನು ನಿರ್ಮಾಣ ಮಾಡಿದ್ದಾರೆ, ಅದಕ್ಕೆ 40 ಪರ್ಸೆಂಟ್ ತೆರಿಗೆಯನ್ನು ಇವತ್ತಿನವರೆಗೂ ವಿಧಿಸಿಲ್ಲ. ಇಂತಹ ತೆರಿಗೆಗಳನ್ನು ನಗರ ಪಾಲಿಕೆ ಪಡೆದರೆ ತೆರಿಗೆಯನ್ನು ಹೆಚ್ಚಿಗೆ ಮಾಡುವ ಅವಶ್ಯಕತೆ ಬರುವುದಿಲ್ಲ. 1998ರ ಸೆಪ್ಟಂಬರ್‌ನಲ್ಲಿ ತೆರಿಗೆ ಪರಿಷ್ಕರಣೆ ಬಗ್ಗೆ ನಗರ ಪಾಲಿಕೆ ಮನೆ ಮನೆಗೆ ಹೋಗಿ ಅದನ್ನು ಪೂರ್ಣ ಮಾಡಿದರು. ಫೆಬ್ರುವರಿಯಲ್ಲಿ ಅದನ್ನು ಕಂಪ್ಯೂಟರೀಕರಣ ಮಾಡಿ ಅದನ್ನು ಅವರು ನೇರವಾಗಿ ಜನರಿಗೆ ತಲುಪಿಸಿದರು. ಇದನ್ನು ನಮ್ಮ ನಗರ ಪಾಲಿಕೆಯ ಕೌನ್ಸಿಲಿಂಗ್ ಸಭೆಯಲ್ಲಿಯೂ ಸಹ ತಂದಿರಲಿಲ್ಲ. ನಾನು ಏತಕ್ಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಇದನ್ನು ಹೆಚ್ಚಿಗೆ ಮಾಡುವ ಅವಶ್ಯಕತೆ ಇಲ್ಲ. ದಯಮಾಡಿ ಇದರ ಬಗ್ಗೆ ತಕ್ಷಣ ಸರ್ಕಾರ ನಗರ ಪಾಲಿಕೆಗೆ ಸೂಚನೆ ಕೊಟ್ಟು ಇದನ್ನು ಹೆಚ್ಚಳ ಮಾಡಿದೆ ನಮಗೆ ಬರಬೇಕಾದ ಬಾಕಿ ತೆರಿಗೆಯನ್ನು ಎಲ್ಲೆಲ್ಲಿ ಹೆಚ್ಚಿಗೆ ಮಾಡಬೇಕು ಅದರ ಮೂಲಕ ತೆರಿಗೆಯನ್ನು ಹೆಚ್ಚಿಗೆ ಪಡೆದು, ಇದನ್ನು ಸಮವಾಗಿ ಯಾವುದೇ ರೀತಿಯ ಒಂದು ಲೋಪ ದೋಷ ಇಲ್ಲದೆ ಇರುವ ರೀತಿಯಲ್ಲಿ ನಗರ ಪಾಲಿಕೆಗೆ ತಿಳುವಳಿಕೆ ಕೊಡಬೇಕು, ಮತ್ತು ಹೆಚ್ಚಿಗೆ ಆಗುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದೆಂದು ನಾನು ವಿನಂತಿಸುತ್ತಿದ್ದೇನೆ.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ :- ಮೈಸೂರು ನಗರದಲ್ಲಿ ಜನ ವಾಸ ಮಾಡುವುದಕ್ಕಿಂತ ಹೆಚ್ಚಾಗಿ ಕಾವೇರಿ ನದಿಗೆ ಬಿದ್ದು ಸಾಯುವಂಥ ಪರಿಸ್ಥಿತಿಯನ್ನು ತಂದಿಟ್ಟಿದ್ದಾರೆ. ಅವೈಜ್ಞಾನಿಕವಾಗಿ ಕಂದಾಯವನ್ನು ನಿಗದಿ ಮಾಡಿ ಆ ಇನ್ಸಪೆಕ್ಟರ್‌ನನ್ನು ಹಿಡಿದು ಪ್ರತಿಯೊಬ್ಬ ಅಧಿಕಾರಿಯು ಲಂಚದಲ್ಲಿ ಶ್ಯಾಮೀಲಾಗಿ, ಒಬ್ಬ ದೊಡ್ಡ ಮನೆ ಕಟ್ಟಿರುವವನಿಗೆ ಎರಡು ಸಾವಿರ-ಮೂರು ಸಾವಿರ ರೂಪಾಯಿಗಳನ್ನು ತೆರಿಗೆ ಹಾಕಿ, ಚಿಕ್ಕ ಮನೆ ಕಟ್ಟಿರುವವನಿಗೆ 200 ರೂಪಾಯಿಗಳಿಂದ ಎರಡು-ಸಾವಿರ ರೂಪಾಯಿಗಳವರೆಗೆ ತೆರಿಗೆಯನ್ನು ಹಾಕಿದ್ದಾರೆ. ಇಂತಹ ಅವೈಜ್ಞಾನಿಕವಾದ ಕಂದಾಯವನ್ನು ವಿಧಿಸಬೇಕಾದರೆ ಅಧಿಕಾರಿಗಳು ಏನು ಮಾಡುತ್ತಿದ್ದರು. ಸರ್ಕಾರವನ್ನು ಕೇಳಿದರಾ, ಅವರು ಸರ್ಕಾರವನ್ನು ಕೇಳಲಿಲ್ಲ. ಸರ್ಕಾರದ ಗಮನಕ್ಕೆ ತರದೆ ಅಧಿಕಾರಿಗಳೇ ತೊಗಲಕ್ ದರ್ಬಾರ್ ನಡೆಸಿಕೊಂಡು ಗಾಜಿನ ಮನೆಯಲ್ಲಿ

ಕುಳಿತುಕೊಂಡು ಈ ರೀತಿ ಕಂದಾಯವನ್ನು ಏರಿಸಿದರೆ ಅದು ಜನಗಳಿಗೆ ಗೊತ್ತಾಗುವುದಿಲ್ಲವೇ?

(ಗೊಂದಲ)

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಮಾನ್ಯ ಉಪಾಧ್ಯಕ್ಷರೆ, ಇದು ಮೈಸೂರು ಮಹಾ ನಗರ ಪಾಲಿಕೆಗೆ ಅಸೆಸ್‌ಮೆಂಟ್ ಆಗಿದ್ದು 1988ರಲ್ಲಿ, as per our Bye-laws and the Act. ವರ್ಷಕ್ಕೆ ಒಂದು ಸಲ ಅಸೆಸ್‌ಮೆಂಟ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ :- ಇದು ಬೈಲಾ ಅಲ್ಲಾ, ಇದು ವೈಜ್ಞಾನಿಕವಾಗಿ ಇದನ್ನು ಮಾಡಿಲ್ಲ. ಇದೊಂದು ಹಗಲು ದರೋಡೆ ಆಗುತ್ತಿದೆ, ಇದನ್ನು ತಾವು ಪರಿಶೀಲನೆ ಮಾಡಬೇಕು. ಇಷ್ಟ ಬಂದಂತೆ ಮೇಯರ್, ಕಮೀಷನರಿಗೆ ವಹಿಸಿ ಇದನ್ನು ಮಾಡುವುದಕ್ಕಾಗುವುದಿಲ್ಲ. ಇಡೀ ಮೈಸೂರು ನಗರದ ಜನರು ವಿರೋಧ ಮಾಡುತ್ತಿದ್ದಾರೆ. ಇದನ್ನು ಮಾಡಿದ್ದು ತಾವು ಸರಿ ಎಂದು ಒಪ್ಪಿಕೊಳ್ಳುವುದಕ್ಕೆ ಹೋಗಬೇಡಿ. ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ, ಇದನ್ನು ಮಾಡಿದ್ದು ತಡೆಹಿಡಿದು ಪ್ರಾಮಾಣಿಕವಾಗಿ ಪರಿಶೀಲನೆ ಮಾಡಿ ನೀವು. ಇದು ನ್ಯಾಯವಾಗಿದ್ದರೆ ಪ್ರಶ್ನೆ ಬೇರೆ. ಖಂಡಿತವಾಗಿ ಅನ್ಯಾಯವಾಗಿದೆ, ಹಗಲು ದರೋಡೆ ಆಗುತ್ತಿದೆ. ಅಲ್ಲಿ ಭ್ರಷ್ಟಾಚಾರ ಆಗುತ್ತಿದೆ, ತಾವು ಅದನ್ನು ಪರಿಶೀಲನೆ ಮಾಡಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಇದಕ್ಕೆ ಹೊಸ ಅಸೆಸ್ ಮಾಡುವುದಕ್ಕೆ ಆ ಸಿಟಿಯನ್ನು ನಾಲ್ಕು ಜೋನ್‌ನಲ್ಲಿ ಡಿವೈಡ್ ಮಾಡಿ ಎಬಿಸಿಡಿ ಕ್ಯಾಟಗರಿ ಮಾಡಿ ಎ ಮತ್ತು ಬಿ ಗೆ ಎಷ್ಟು ಕಂದಾಯವನ್ನು ಫಿಕ್ಸ್ ಮಾಡಬೇಕೆಂದು ಹೇಳಿ, ಅಸೆಸ್‌ಮೆಂಟ್ ಮಾಡಿ, ಇದಕ್ಕೆ ರಿಪೋರ್ಟ್‌ಕೊಟ್ಟಿದೆ. ತಾವು ಹೇಳಿದಿರಿ, ದೊಡ್ಡ ಮನೆಗೆ ಸ್ವಲ್ಪ ಕಂದಾಯ ಮಾಡಿ ಸಣ್ಣ ಮನೆಗೆ ಹೆಚ್ಚು ಕಂದಾಯ ಮಾಡಿದ್ದಾರೆಂದು ಹೇಳಿದಿರಿ. ಅಂತಹ ವೈಯಕ್ತಿಕವಾಗಿ ಏನಾದರೂ ಹೆಚ್ಚಿಗೆ ಕಂದಾಯ ಹಾಕಿದ್ದರೆ ಅದನ್ನು ರೆಕ್ಟಿಫೈ ಮಾಡುವುದಕ್ಕೆ ಆಯುಕ್ತರಿಗೆ ಪವರ್ ಇದೆ. ಕಮೀಷನರ್ ಮಾಡಿದ್ದು ಸರಿಯಿಲ್ಲವೆಂದರೆ ಅಪೀಲ್ ಕಮಿಟಿಗೆ ಹೋಗಬಹುದು. ಜನರಲ್ಲಾಗಿ ಹೆಚ್ಚಾಗಿದೆ ಎಂದರೆ ಈಗಿರುವ ಸದನ ಕಮಿಟಿಗೆ ಸ್ಪೇ ಮಾಡಿ ಒಂದು ಕಮಿಟಿ ನಾವು ಫಾರ್ಮ್ ಮಾಡಿದ್ದೇವೆ. ಇನ್ನೊಂದು ಸಲ ಕಮೀಷನರ್, ಮೇಯರ್, ಸೆಕ್ರೆಟರಿ ಹಾಗೂ ನೀವು ಇಬ್ಬರು ಶಾಸಕರನ್ನು ಕರೆಸಿ ಎಲ್ಲಿ ತಪ್ಪಾಗಿದೆ ಅದನ್ನು ನಾನು ಸೆಟ್-ರೈಟ್ ಮಾಡುತ್ತೇನೆ.

ಶ್ರೀ ಎ.ರಾಮದಾಸ್ :- ಪ್ರಮುಖವಾದಂಥ ಪ್ರಶ್ನೆಯನ್ನು ಮಂತ್ರಿಗಳನ್ನು ಕೇಳುತ್ತಿರುವುದು. ಮಂತ್ರಿಗಳೇ ಹೇಳಿದಂಥ ಮಾತು. ಇಲ್ಲಿ ಕಂದಾಯ ತಾರತಮ್ಯವಾಗಿರುವುದು ಒಬ್ಬರಿಗೆ ಅಲ್ಲ. ಅದರ ಬಗ್ಗೆ ಒಪ್ಪಿಗೆ ಆಗಿ ಸರ್ಕಾರದಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಆಗಬೇಕಾಗಿತ್ತು. ಸರ್ಕಾರದವರಾದ ತಾವು ಇದರ ಬಗ್ಗೆ ಪರಿಷ್ಕರಣೆಗೆ ಒಪ್ಪಿಗೆಯನ್ನು ಕೊಟ್ಟಿದ್ದೀರಾ? ಎಷ್ಟು ಪರ್ಸೆಂಟ್ ಹೆಚ್ಚಿಗೆ ಮಾಡುವುದಕ್ಕೋಸ್ಕರ ಕೊಟ್ಟಿದ್ದೀರಿ ಎನ್ನುವುದನ್ನು ಇಲ್ಲಿ ಕೊಟ್ಟಿಲ್ಲ. ಎರಡನೆಯದಾಗಿ ಎಬಿಸಿಡಿ ವರ್ಗಗಳು ಎಂದು ಏನು ಮಾಡಿದ್ದಾರೆ, ಈ ವರ್ಗೀಕರಣ ಮಾಡುವುದಕ್ಕೆ ಕೂಡ ಸರ್ಕಾರದಿಂದ ತಮ್ಮ ಇಲಾಖೆಯಿಂದ ಗೆಜೆಟ್ ನೋಟಿಫಿಕೇಷನ್ ಆಗಿ ವರ್ಗೀಕರಣದ ಬಗ್ಗೆ ಆಗಬೇಕಾಗಿತ್ತು. ಇವತ್ತಿನವರೆಗೂ ತಮ್ಮ ಇಲಾಖೆಯಿಂದ ಏನು ಪರವಾನಗೆ ಸಿಗದೆ ಕೇವಲ ನಗರ ಪಾಲಿಕೆಯೇ ಮಾಡಿಕೊಳ್ಳುವ ವ್ಯವಸ್ಥೆ ಮಾಡಿದ್ದೀರಿ. ತಮ್ಮ ಪಕ್ಷದ ದೊಡ್ಡ ದೊಡ್ಡ ಬಂಗಲೆಗಳು ಇರುವ ವ್ಯಕ್ತಿಗಳಿಗೆ -5 ನಾನು ಈ ಮಾತನ್ನು ಸದನದಲ್ಲಿ ಹೇಳುತ್ತಿದ್ದೇನೆ. ತಮ್ಮ ಪಕ್ಷದ ಸದಸ್ಯರು 1985ನೇ ಇಸ್ವಿಯಲ್ಲಿ

ಏನು ಕಂದಾಯ ಕೊಡುತ್ತಿದ್ದರು, ಅವರಿಗೆ ಶೇಕಡಾ 5 ಪರ್ಸೆಂಟ್ ಕಂದಾಯವನ್ನು ಕಡಿಮೆ ಮಾಡಿರುತ್ತೀರಿ. ಬೇರೆಯವರಿಗೆ ಎರಡು ಸಾವಿರದಿಂದ 3 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಈ ರೀತಿ ತಾರತಮ್ಯ ಮಾಡುವುದಕ್ಕೆ ತಾವು ಯಾವ ಗೈಡಲೈನ್ಸ್‌ನ್ನು ನಗರ ಪಾಲಿಕೆಗೆ ಕೊಟ್ಟಿರುತ್ತೀರಿ ಅದನ್ನು ದಯಮಾಡಿ ತಾವು ಹೇಳಬೇಕು.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ :- ಎಬಿಸಿಡಿ ಕ್ಯಾಟಗರಿ ಮಾಡುವುದಕ್ಕೆ ಸೆಪರೇಟ್ ಆಗಿ ಸರ್ಕಾರದಿಂದ ಯಾವ ಆರ್ಡರ್ ಮಾಡಬೇಕಾಗಿಲ್ಲ. ಸೆಕ್ಷನ್ 108ರಲ್ಲಿ ಸ್ಪೆಸಿಫಿಕ್ಕಾಗಿ ಕ್ಲಿಯರ್ ಇದೆ. ಆ ಸೆಕ್ಷನ್ 108ರ ಪ್ರಕಾರ ನಾವು ಇದನ್ನು ಮಾಡಿರುತ್ತೇವೆ.

ಶ್ರೀ ಎಚ್.ಎಸ್.ಶಂಕರಲಿಂಗೇಗೌಡ :-ಇದು ನಿಜವಾಗಿಯೂ ತಪ್ಪು. ಕುವೆಂಪುನಗರದಲ್ಲಿ ಬರೀ ಶ್ರೀಮಂತರು ಇಲ್ಲ, ಅಲ್ಲಿ ಬಡವರು ಕೂಡ ಇದ್ದಾರೆ. ಮಧ್ಯಮ ವರ್ಗದವರು ಹಾಗೂ ಅರೆ ಮಧ್ಯಮ ವರ್ಗದವರು ಇದ್ದಾರೆ. ಆದ್ದರಿಂದ ಎಬಿಸಿಡಿ ಎಂದು ವರ್ಗೀಕರಣ ಮಾಡುವುದು ತಪ್ಪು. ಇಲ್ಲಿ ಇರತಕ್ಕಂಥ ಎಲ್ಲಾ ಶಾಸಕರನ್ನು ಎಬಿಸಿಡಿ ಎಂದು ಮಾಡಿ ಕಳುಹಿಸಿದ್ದಾರೆಯೇ? ಅದನ್ನು ವೈಜ್ಞಾನಿಕವಾಗಿ ಮಾಡಿದ್ದಾರಾ ? ಅವರಿಗೆ ಏನಾದರೂ ತಲೆ ಇದೆಯೇ? ಜನ ಬಂದು ನಮ್ಮ ಹತ್ತಿರ ಗಲಾಟೆ ಮಾಡುತ್ತಾರೆ.

(ಗೊಂದಲ)

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :-ಮಾನ್ಯ ಸಚಿವರು, ಕಮೀಷನರ್ ಹಾಗೂ ಶಾಸಕರನ್ನು ಕರೆಸಿ ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರೆ. ಸ್ವಲ್ಪ ಸಮಾಧಾನವಾಗಿ ಇರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರ ಪ್ರಶ್ನೆ ಏನು ಎನ್ನುವುದನ್ನು ತಾವು ಮೊದಲು ದಯಮಾಡಿ ಅರ್ಥ ಮಾಡಿಕೊಳ್ಳಿ. ಮೈಸೂರು ನಗರ ಪಾಲಿಕೆಯವರು ಮನೆ ಕಂದಾಯವನ್ನು ಹೆಚ್ಚಿಗೆ ಮಾಡಿದ್ದಾರೆ. ಅದಕ್ಕೆ ಮೊದಲು ಸರ್ಕಾರದಿಂದ ಅನುಮತಿಯನ್ನು ಪಡೆದಿದ್ದರೆ?ಅನುಮತಿಯನ್ನು ಪಡೆದಿದ್ದರೆ ಸರ್ಕಾರ ಎಷ್ಟು ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಬೇಕೆಂದು ನೀವು ಅನುಮತಿಯನ್ನು ಕೊಟ್ಟಿರುತ್ತೀರಿ. ಮೂರನೆಯ ಪ್ರಶ್ನೆ, ನಿಗದಿ ಮಾಡಿರತಕ್ಕಂಥ ಯುನಿಫಾರ್ಮಿಟಿ ಇಲ್ಲ. ವರ್ಗೀಕರಣ ಸರಿಯಾಗಿಲ್ಲ, ವರ್ಗೀಕರಣದಲ್ಲಿ ಬಹಳ ಅನ್ಯಾಯವಾಗಿದೆ. ಶ್ರೀಮಂತರಿಗೆ ಹಾಗೂ ಬಡವರಿಗೆ ಒಂದೇ ರೀತಿಯ ತೆರಿಗೆಯನ್ನು ಹಾಕಿದ್ದೀರಿ. ಇದು ಅವೈಜ್ಞಾನಿಕ. ಈ ಮೂರು ಪ್ರಶ್ನೆಗಳಿಗೆ ನೀವು ಸರಿಯಾದ ಉತ್ತರವನ್ನು ಕೊಡಿ. ನೀವು ಸರ್ಕಾರದಿಂದ ಮೊದಲು ಅನುಮತಿಯನ್ನು ಕೊಟ್ಟಿದ್ದೀರಾ ಅದಕ್ಕೆ ನೀವು ಉತ್ತರವನ್ನು ಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್ :- ಇವತ್ತಿನ ಈ ಪ್ರಶ್ನೆ, ಮೈಸೂರು ಮಹಾನಗರ ಪಾಲಿಕೆಯ ಬಗ್ಗೆ ಬಂದಿದೆ. ಈ ಆಸ್ತಿ ತೆರಿಗೆಯನ್ನು ಫಿಕ್ಸ್ ಮಾಡುವುದು ಏನು ಇದೆ, ಅದು ಹಗಲು ದರೋಡೆ. ಯಾವುದೇ ಪುರಸಭೆ ಹಾಗೂ ನಗರಸಭೆಯಲ್ಲಿ ಇದೊಂದು ವಾಸ್ತವಾಂಶ. ಇದು ಎಷ್ಟರಮಟ್ಟಿಗೆ ಎಂದರೆ, ಬೆಂಗಳೂರಿನಲ್ಲಿ ರಸ್ತೆ ಡಕಾಯಿತಿ ನಡೆದಾಗಲೂ ಕೂಡ ಈ ವಿಷಯವನ್ನು ನಾವು ಮೆನ್‌ಷನ್ ಮಾಡಿದ್ದೇವೆ. ಏಕೆ ನೀವು ವರಮಾನ ತೆರಿಗೆ ಅಥವಾ ಕಮರ್ಷಿಯಲ್ ಟ್ಯಾಕ್ಸ್ ಕಟ್ಟುವಾಗ ಸೆಲ್ಫ್ ಅಸೆಸ್‌ಮೆಂಟ್ ಇದ್ದಂತೆ, ನಾವೇ ನನ್ನ ಮನೆಯ ಕಂದಾಯ ಎಷ್ಟು ಆಗುತ್ತದೆಂದು ನಿಗದಿ ಮಾಡುವ

ಹಾಗೆ ಮಾಡುವುದಿಲ್ಲ. ಯಾವುದೋ ಟ್ಯಾಕ್ಸ್ ಇನ್ಸಪೆಕ್ಟರ್ ಕೈಕೆಳಗೆ ನಾನು ಏಕೆ ಇರಬೇಕು. ಅದಕ್ಕೋಸ್ಕರ ನಾನು ಸರ್ಕಾರವನ್ನು ಆಗ್ರಹ ಮಾಡುವುದು. ಸೆಲ್ಫ್ ಅಸೆಸ್‌ಮೆಂಟ್ ಇರಬೇಕು. ನನಗೆ ನನ್ನ ಮನೆಯ ತೆರಿಗೆ ಎಷ್ಟು ಎಂದು ನನಗೆ ಗೊತ್ತಾಗಬೇಕು. ನಾನೇ ಕಂದಾಯವನ್ನು ಫಿಕ್ಸ್ ಮಾಡುವಂತೆ ಇರಬೇಕು. ಅವನು ಇಷ್ಟಾ ಬಂದಂತೆ ಒಬ್ಬನಿಗೆ 5 ರೂಪಾಯಿ ಹಾಗೂ ಇನ್ನೊಬ್ಬನಿಗೆ 500 ರೂಪಾಯಿಗಳನ್ನು ಹಾಕುವಂತೆ ಇರುವುದು ಇದು ಯಾವುದೇ ರೀತಿಯಲ್ಲಿ ಒಳ್ಳೆಯದಲ್ಲ. ಅವರು ಹೇಳಿದಂತೆ ಇದರಲ್ಲಿ ರಾಜಕೀಯ ಬೆರೆತು ಆಡಳಿತ ಪಕ್ಷದ ಸದಸ್ಯರಿಗೆ ಕಡಿಮೆ ಹೆಚ್ಚು ಮಾಡುತ್ತೇವೆ, ಬೇರೆಯವರಿಗೆ ಯದ್ವಾತದ್ವಾ ಜಾಸ್ತಿ ಮಾಡುತ್ತೇವೆ ಎಂಬುದಕ್ಕೂ ನೀವು ಉತ್ತರವನ್ನು ಕೊಡಬೇಕಾಗುತ್ತದೆ. ಈಗ ಶ್ರೀ ಶ್ರೀರಾಮರೆಡ್ಡಿಯವರು ಕೇಳಿರುವ ಮೂರು ಪ್ರಶ್ನೆಗಳಿಗೆ ನೀವು ಉತ್ತರವನ್ನು ಕೊಡಿ. ಸರ್ಕಾರದಿಂದ ಅನುಮತಿ ಇತ್ತಾ, ಎಷ್ಟು ಪರ್ಸೆಂಟ್ ಮಾಡಬೇಕೆಂದು ಇತ್ತು. ಅದನ್ನು ಯೂನಿಫಾರ್ಮ್ ಆಗಿ ನೀವು ಜಾರಿಗೆ ತಂದಿದ್ದೀರಾ ಎಂಬುದರ ಬಗ್ಗೆ ಉತ್ತರವನ್ನು ಕೊಡಿ.

ಶ್ರೀ ಮೀರಾಜದ್ದೀನ್ ಎನ್.ಪಟೇಲ್ :- ಮಾನ್ಯ ಉಪಾಧ್ಯಕ್ಷರೆ, ಅವರು ಏನು ಪ್ರಶ್ನೆ ಕೇಳಿದಾರೆ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಸರ್ಕಾರದಿಂದ ಅನುಮತಿ ತೆಗೆದುಕೊಂಡು ಮಾಡಿರುತ್ತಾರಾ ಎಂದು ಕೇಳಿದ್ದಾರೆ. ಅಲ್ಲಿ ಸದನ ಸಮಿತಿ ಮಾಡಿ ತೀರ್ಮಾನ ಮಾಡಿರುತ್ತಾರೆ. ಎರಡನೆಯಾದಾಗಿ ಯೂನಿಫಾರ್ಮ್ ಆಗಿ ಎಲ್ಲರಿಗೂ ಒಂದೇ ಆಗಬೇಕು. ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಹೆಚ್ಚು ಕಡಿಮೆ ಆಗಿದೆ ಎಂದು ಅವರ ವಾದ ಇದೆ, ಅದರ ಬಗ್ಗೆ ಎಲ್ಲರಿಗೂ ಒಂದೇ ಆಗುವಂತೆ ಒಂದು ಯೂನಿಫಾರ್ಮ್ ಆಗಿ ಒಂದು ಸಭೆಯನ್ನು ಕರೆದು ಅದನ್ನು ಸೆಟ್ ರೈಟ್ ಮಾಡಿ ಆ ಪ್ರಕಾರ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅಲ್ಲಿಯವರೆಗೆ ತಡೆ ಹಿಡಿಯಬೇಕು.

(ಗೊಂದಲ)

ಶ್ರೀ ಮೀರಾಜುದ್ದೀನ್ ಎನ್.ಪಟೇಲ್:- ತಡೆಹಿಡಿಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅಲ್ಲಿಯವರೆಗೆ ಈ ಆದೇಶವನ್ನು ತಡೆಹಿಡಿದು ಮನೆ ಕಂದಾಯವನ್ನು ವಸೂಲಿ ಮಾಡಬಾರದು. ಹಳೆಯ ದರದಲ್ಲಿಯೇ ಇರಬೇಕು.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ :- ಒಂದು ತಿಂಗಳಲ್ಲಿ ಒಂದು ಸಭೆಯನ್ನು ಕರೆದು ನಮ್ಮ ಮೇಯರ್, ಸೆಕ್ರೆಟರಿ ಹಾಗೂ ಶಾಸಕರನ್ನು ಕರೆದು ಎಲ್ಲರಿಗೂ ಯೂನಿಫಾರ್ಮ್ ಆಗಿ ಒಂದೇ ಮಾಡಿ ಅದನ್ನು ಜಾರಿಗೆ ತರುತ್ತೇವೆ.

(ಗೊಂದಲ)

ಶ್ರೀ ಎಚ್.ಎಸ್.ಶಂಕರಲಿಂಗೇಗೌಡ :- ಅಲ್ಲಿಯವರೆಗೆ ಇದನ್ನು ತಡೆ ಹಿಡಿಯಬೇಕು.

ಶ್ರೀ ಎಸ್ ಸುರೇಶ್ ಕುಮಾರ್ :- ನಾನು ಸೆಲ್ಫ್ ಅಸೆಸ್‌ಮೆಂಟ್ ಬಗ್ಗೆ ಹೇಳಿದ್ದೆ.

ಉಪಾಧ್ಯಕ್ಷರು:- ಅವರು ಹೇಳಿದ್ದಾರೆ.

ಶ್ರೀ ಎ. ರಾಮದಾಸ್ :- ಮೈಸೂರು ಮಹಾ ನಗರ ಪಾಲಿಕೆಯವರು 1988ರಲ್ಲಿ ಎಬಿಸಿಡಿ ವರ್ಗವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದರು, ಅದಕ್ಕೆ ಸರ್ಕಾರ ಅನುಮತಿಯನ್ನು ಕೊಡದೆ

ರದ್ದು ಮಾಡಿದೆ. ಆದರೂ ಕೂಡ ಸರ್ಕಾರದ ಆದೇಶದ ವಿರುದ್ಧವಾಗಿ ನಗರ ಪಾಲಿಕೆಯವರು ಆದೇಶ ಕೊಟ್ಟಿದ್ದಾರೆ, ಏಕೆ ಎಂದು ನನ್ನ ಪ್ರಶ್ನೆ. ಅವರು ತಪ್ಪು ಮಾಹಿತಿಯನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ :- ಅಲ್ಲಿ ಜನ, ವಿಷ ಜಂತುಗಳಿಂದ ಸಾಯುತ್ತಿದ್ದಾರೆ. ನಾಗರೀಕ ಸೌಲಭ್ಯಗಳು ಸರಿಯಾಗಿಲ್ಲ. ವರ್ಗೀಕರಣ ಮಾಡಿದರೆ ಆಯಿತಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :- ಸಭೆಯನ್ನು ಕರೆದು ಆ ಸಭೆಯಲ್ಲಿ ಸೆಟ್-ರೈಟ್ ಮಾಡುತ್ತೇನೆಂದು ಹೇಳಿದ್ದೇನೆ. ಅದು ಮಾಡಬೇಡಿ ಇದನ್ನು ಮಾಡಬೇಡಿ ಎಂದು ಹೇಳುವುದು ಸರಿಯಲ್ಲ. ಎಬಿಸಿಡಿ ವರ್ಗೀಕರಣ ಮಾಡುವುದು ಬೇಡ ಎನ್ನುವ ಬಗ್ಗೆ ಡಿಸೈಡ್ ಮಾಡಬೇಕು. ನಾನು ಸಭೆಯನ್ನು ಕರೆಯುತ್ತೇನೆ ನೀವು ಆ ಸಭೆಗೆ ಬಂದು ಚರ್ಚೆ ಮಾಡಿ.

ಉಪಾಧ್ಯಕ್ಷರು :- ಅವರು ಒಪ್ಪಿಕೊಂಡ ಮೇಲೆ ಈ ವಿಷಯ ಮುಗಿದು ಹೋಯಿತು.

ಬೈಂದೂರು ಮತ್ತು ಅರ್ಡಿ ಆಶ್ರಮ ಶಾಲೆಗೆ ಶಿಕ್ಷಕರ ನೇಮಕ

247 (1669)

ಶ್ರೀ. ಕೆ. ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೈಂದೂರು ಮತ್ತು ಅರ್ಡಿ ಇಲ್ಲಿ ಆಶ್ರಮ ಶಾಲೆ ಇದ್ದು, ಶಿಕ್ಷಕರ ನೇಮಕಾತಿ ಆಗದೆ ಇರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಶಿಕ್ಷಕರನ್ನು ನೇಮಿಸಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಶ್ರೀ. ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಮತ್ತು ಆ) ಬೈಂದೂರು ಮತ್ತು ಅರ್ಡಿಯಲ್ಲಿರುವ ಆಶ್ರಮ ಶಾಲೆಗಳಲ್ಲಿ ಶಿಕ್ಷಕರನ್ನು ಖಾಯಂ ಆಗಿ ನೇಮಕ ಮಾಡಿರುವುದಿಲ್ಲ. ಆದಾಗ್ಯೂ ಆ ಶಾಲೆಗಳ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಸಲುವಾಗಿ ಗೌರವಧನದ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಖಾಯಂ ಶಿಕ್ಷಕರನ್ನು ಅದಷ್ಟು ಬೇಗ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ. ಕೆ. ಗೋಪಾಲ ಪೂಜಾರಿ :- ಸನ್ಮಾನ್ಯ ಉಪಾಧ್ಯಕ್ಷರೆ, ಬೈಂದೂರು ಮತ್ತು ಅರ್ಡಿ ಆಶ್ರಮ ಶಾಲೆಯಲ್ಲಿ ಶಿಕ್ಷಕರನ್ನು ಗೌರವಧನದಲ್ಲಿ ನೇಮಕಾತಿಯನ್ನು ಮಾಡಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಆಶ್ರಮಶಾಲೆಯಲ್ಲಿ ಸರಿಯಾಗಿ ಶಿಕ್ಷಕರು ಅಲ್ಲಿಗೆ ಬರುತ್ತಿಲ್ಲ. ಈ ಹಿಂದೆ ನಾನು ಸಚಿವರನ್ನು ಭೇಟಿಯಾಗಿ ಖಾಯಂ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ಮನವಿಯನ್ನು ಕೊಟ್ಟಿದ್ದೇನೆ. ಆದರೆ ಇಲ್ಲಿಯತನಕ ಖಾಯಂ ನೇಮಕಾತಿ ಆಗಲಿಲ್ಲ. ಖಾಯಂ ನೇಮಕಾತಿಯನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಯಾವಾಗ ಖಾಯಂ ನೇಮಕಾತಿಯನ್ನಾಗಿ ಮಾಡುತ್ತೀರಿ ಎಂಬ ಬಗ್ಗೆ ನನಗೆ ಉತ್ತರ ಬೇಕಾಗಿದೆ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣಾ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಈ ಆಶ್ರಮ ಶಾಲೆಗಳಿಗೆ ನಾವು ಖಾಯಂ ಆಗಿ ಉಪಾಧ್ಯಾಯರನ್ನು ನೇಮಕ ಮಾಡುವಲ್ಲಿ ಬಹಳ ತೊಂದರೆಯಾಗಿದೆ. ಗೌರವಯುತವಾಗಿ ನಾವು ಪೇಮೆಂಟನ್ನು ಕೊಟ್ಟು, ಅವರು ಶಿಕ್ಷಕರಾಗಿ ಅಲ್ಲಿ ಕೆಲಸ ಮಾಡುವುದು ಸರಿಯಲ್ಲ. ಅದು ಸಕ್ರಮವಲ್ಲ